# ಕರ್ನಾಟಕ ಸರಕಾರ

ಸಂಖ್ಯೆ : ಕಂ/ವಿಭೂಸ್ವಾಅ/ಮುಮರೈಲೈ/03/2016-17

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ
ಮುನಿರಾಬಾದ್-ಮಹೆಬೂಬನಗರ ರೇಲ್ವೆ ಲೈನ್
ನಿರ್ಮಾಣ ಯೋಜನೆ, ಸಿಂಧನೂರ.
ದಿನಾಂಕ : 22-06-2017

180

**ಎನ್.ಐ.ಸಿ ಅಧಿಕಾರಿಗಳು**
**ಜಿಲ್ಲಾಡಳಿತ ಕಛೇರಿ**
**ಕೊಪ್ಪಳ -ಇವರಿಗೆ**
**ಮಾನ್ಯರೇ,**

**ವಿಷಯ :** ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಂಗಾವತಿ-2, ಜಂಗಮರಕಲ್ಗುಡಿ ಮತ್ತು ಬರಗೂರು ಗ್ರಾಮಗಳ ಜಮೀನುಗಳ ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ಸಂಬಂಧ ನಮೂನೆ-1 ಅಧಿಸೂಚನೆ ಜಾರಿ ಮಾಡುವ ಬಗ್ಗೆ.

* * *0* * *

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಂಗಾವತಿ-2, ಜಂಗಮರಕಲ್ಗುಡಿ ಮತ್ತು ಬರಗೂರು ಗ್ರಾಮಗಳ ಜಮೀನುಗಳು ಮುನಿರಾಬಾದ್-ಮಹೆಬೂಬನಗರ ರೈಲ್ವೆ ಲೈನ್ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಾವಳಿ-2015 ರ ನಿಯಮ-3 ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಮಾಡಬೇಕಾಗಿದ್ದು, ಈ ಸಂಬಂಧ ಜಿಲ್ಲಾಧಿಕಾರಿಗಳು ಕೊಪ್ಪಳ ಇವರು ನಿಯಮ 3 (6) ರಂತೆ ನಮೂನೆ-1 ಭಾಗ ಎ ಅಧಿಸೂಚನೆ ಹೊರಡಿಸಿದ್ದು ಇದರನ್ವಯ ಸದರಿ ಅಧಿಸೂಚನೆಯನ್ನು ಜಿಲ್ಲಾ ವೆಬ್ ಸೈಟ್ ನಲ್ಲಿ ಅಪಲೋಡಗೊಳಿಸಿ ಮತ್ತು ಪ್ರಚುರಪಡಿಸಿದ ಬಗ್ಗೆ ಈ ಕಾರ್ಯಾಲಯಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಗಿದೆ.

ಲಗತ್ತು : ಅಧಿಸೂಚನೆ ಪ್ರತಿ

ತಮ್ಮ ವಿಶ್ವಾಸಿ

ವಿಶೇಷ ಭೂಸ್ವಾಧೀನಾಧಿಕಾರಿಗಳು
ಮುನಿರಾಬಾದ್-ಮಹೆಬೂಬನಗರ ರೈಲ್ವೆ ಲೈನ್
ನಿರ್ಮಾಣ ಯೋಜನೆ, ಸಿಂಧನೂರು.

**ಇದರ ಪ್ರತಿಯನ್ನು :**

1) ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.